
# 1. ಶಬರಿ (ಗೀತನಾಟಕ)

**– ಪು. ತಿ. ನರಸಿಂಹಾಚಾರ್ಯ**

## ಕವಿ – ಕಾವ್ಯ ಪರಿಚಯ



**ಪು.ತಿ. ನರಸಿಂಹಾಚಾರ್**

ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು **ಕ್ರಿ.ಶ. 1905**ರಲ್ಲಿ **ಮಂಡ್ಯ ಜಿಲ್ಲೆಯ ಮೇಲುಕೋಟೆ** ಎಂಬ ಊರಿನಲ್ಲಿ ಜನಿಸಿದ್ದಾರೆ.

ಇವರು **ಶಬರಿ, ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ **ಹಂಸದಮಯಂತಿ ಮತ್ತು ಇತರ ರೂಪಕಗಳು** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** ಹಾಗೂ **ಶ್ರೀಹರಿಚರಿತೆ** ಕಾವ್ಯಕ್ಕೆ **'ಪಂಪ ಪ್ರಶಸ್ತಿ'** ಗಳನ್ನು ಪಡೆದಿದ್ದಾರೆ.

## ಪಾಠದ ಪೂರ್ವಕತೆ

ಶಬರಿ ಗೀತನಾಟಕ ರಾಮಾಯಣ ಮಹಾಕಾವ್ಯವನ್ನು ಆಧರಿಸಿದೆ. ರಾಮಾಯಣ ಮಹಾಕಾವ್ಯವು ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದು. ಈ ರಾಮಾಯಣ ಮಹಾಕಾವ್ಯದಲ್ಲಿ ಬರುವ ಒಂದು ಪಾತ್ರವೇ ಶಬರಿ. ಶಬರಿ ಒಬ್ಬ ಬೇಡ ರಾಜನ ಮಗಳು. ಅವಳು ಮದುವೆಯ ಸಂದರ್ಭದಲ್ಲಿ ಈಕೆಯ ತಂದೆ ಮದುವೆಯ ಊಟಕ್ಕಾಗಿ ಅಸಂಖ್ಯಾತ ಪ್ರಾಣಿಗಳನ್ನು ಹಿಡಿದು ತಂದಿರುತ್ತಾನೆ. ಆದರೆ ಶಬರಿಗೆ ಪ್ರಾಣಿಗಳ ಮೇಲೆ ಅತೀವ ಪ್ರೀತಿ ಅವುಗಳನ್ನು ಕೊಲ್ಲುವುದು ಅವಳಿಗೆ ಇಷ್ಟವಿರಲಿಲ್ಲ. ಇದಕ್ಕೆ ತಂದೆ ಒಪ್ಪದೆ ಇದ್ದಾಗ ಮನೆ ಬಿಟ್ಟು ಬಂದು ಮತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ. ಮತಂಗ ಋಷಿಗಳು ಪ್ರತಿನಿತ್ಯ ದಶರಥ ಪುತ್ರನಾದ ಶ್ರೀರಾಮನ ಗುಣ ಸ್ವಭಾವಗಳನ್ನು ಹಾಡಿ ಹೊಗಳುತ್ತಿರುತ್ತಾರೆ. ಇದರಿಂದ ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂಬ ಹಂಬಲದಲ್ಲಿ ಇರುತ್ತಾಳೆ. ಮತಂಗ ಋಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು.

ಇತ್ತ ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ ದನು ಮಹರ್ಷಿಯ ಭೇಟಿಯಾಗುತ್ತಾರೆ. ಈ ದನು ಮಹರ್ಷಿಯು ರಾಮಲಕ್ಷ್ಮಣರಿಗೆ ಶಬರಿಯ ವೃತ್ತಾಂತವನ್ನು ತಿಳಿಸಿ ಮತಂಗಾಶ್ರಕ್ಕೆ ಹೋಗಲು ಸೂಚಿಸುತ್ತಾನೆ. ದನುವಿನ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆನಂದಿಸಿ, ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸುತ್ತಾಳೆ. ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸಿದ ಸಂದರ್ಭವೇ ಈ ಗೀತ ನಾಟಕ.

## ಪಾಠದ ಆಶಯ ಭಾವ

ತನ್ನ ಆರಾಧ್ಯ ಪುರುಷನ ದರ್ಶನದಿಂದ ಕೃತಾರ್ಥಳಾಗುವೆನೆಂಬ ಭಾವದಿಂದ ಶಬರಿ ಶ್ರೀರಾಮನಿಗಾಗಿ ಹಂಬಲಿಸಿ ಕಾತರಿಸುತ್ತಾಳೆ. ಶ್ರೀರಾಮದರ್ಶನ ಆಕೆಗೆ ಧನ್ಯತೆಯನ್ನು ತಂದು ಕೊಡುತ್ತದೆ. ರಾಮಲಕ್ಷ್ಮಣರನ್ನು ಆದರ ಆತಿಥ್ಯದಿಂದ ಸತ್ಕರಿಸಿ. ಗೌರವಿಸಿದ ಶಬರಿ ತನ್ನ ಬಾಳಿನ ಹಂಬಲ ತೀರಿದ ನಂತರ ಬಾಳು ಅರ್ಥಹೀನವೆಂದು ಭಾವಿಸಿ, ಮುಕ್ತಿಗಾಗಿ ಪ್ರಯತ್ನಿಸುವ ಸಂವೇದನೆಗೆ ಒಳಗಾಗುತ್ತಾಳೆ. ಶಬರಿಯ ಮುಗ್ಧತೆ, ಶ್ರೀರಾಮನ ಸರಳ–ಸಜ್ಜನಿಕೆ, ಹಿತ–ಮಿತ ಮೃದುವಚನ, ಲಕ್ಷ್ಮಣನ ವಿನಯದ ಸಹಚರತೆ ಮನೋಜ್ಞವಾಗಿ ಈ ಪಾಠದಲ್ಲಿ ಮೂಡಿಬಂದಿದೆ.

## ಶಬರಿ ಪಾಠದ ಸಂಕ್ಷಿಪ್ತ ಪರಿಚಯ

ವೃದ್ಧೆಯಾದ ತಪಸ್ವಿನಿ ಶಬರಿ, ಜಿಂಕೆಯ ಬಣ್ಣದಂತಿರುವ ನಾರುಮಡಿ ಉಟ್ಟುಕೊಂಡು ಕೆದರಿದ ಕೂದಲುಳ್ಳವಳಾಗಿ ಮತಂಗಾಶ್ರಮದ ವನದಲ್ಲಿ ರಾಮ ಬರುವನೆಂದು ತವಕಗೊಂಡು, ನೋಡುವುದಕ್ಕೆ ಬುದ್ಧಿಹೀನಳಂತೆ ನಿಂತಿದ್ದಾಳೆ. "ರಾಮ ನಾನು ನಿಂತಲ್ಲಿಯೇ ನಿಂತಿರುವೆನು, ನೀನು ಎಂದು ಬರುವೆ, ನೀನು ಇರುವುದೆಲ್ಲೋ ನನಗೆ ತಿಳಿಯದಾಗಿದೆ. ನಿನ್ನ ಬಳಿ ಬರುವ ದಾರಿ ತಿಳಿಯದಾಗಿದೆ. ನೀನು ಬರುತ್ತೀಯಾ ಎಂಬ ನಂಬಿಕೆಯಲ್ಲಿ ಹುಚ್ಚು ಆಸೆಯಿಂದ ಇರುವೆನು" ಎಂದು ಹಾಡಿಕೊಳ್ಳುತ್ತಾಳೆ.

ಇತ್ತ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಬರುವಾಗ ರಾಮ **"ಅಯ್ಯೋ ಸೀತೆ ದೊರೆವಳೇ, ಭೂಮಿಜಾತೆ, ನನ್ನ ಆತ್ಮ ಬಯಕೆಯ ಕಲ್ಪಲತೆಯಾಗಿರುವ ಚೆಲುವೆ ಸೀತೆ ದೊರೆಯುವಳೇ. ಎಲೈ ಗಿರಿ ವನವೇ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ ಹೇಳಿರಿ, ನನ್ನ ಪ್ರೀತಿಯ ರಾಣಿ ಸೀತೆಯು ದೊರೆಯುವಳೇ? ದೊರೆಯುವುದಿಲ್ಲವೋ? ಅವಳು ಇರುವ ನೆಲೆ ಯಾರಾದರೂ ತಿಳಿದಿರುವಿರಾ. ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ."** ಎಂದು ಗಿರಿವನಗಳನ್ನು ಪ್ರಾರ್ಥಿಸುತ್ತಾನೆ. ಆಗ ಲಕ್ಷ್ಮಣ **"ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?** ಎಂದು ಅಣ್ಣನನ್ನು ಸಂತೈಸಿದನು. ಆಗ ಧೈರ್ಯ ತೆಗೆದುಕೊಂಡ ರಾಮ ಅವಳ ನೆನಪಿನ ಸೆಳೆತ ನನ್ನ ಆತ್ಮಕ್ಕೆ ಸಿಕ್ಕಿ ನನ್ನ ಮನಸ್ಸಿಗೆ ದುಃಖ ಅನಿವಾರ್ಯವಾಗಿದೆ ಎನ್ನುತ್ತ ತಪಸ್ವಿಗಳ ಆಶ್ರಮವನ್ನು ನೋಡಿ ಪುನಃ ಅವಳ ಕಷ್ಟವನ್ನು ನೆನಪಿಸಿತು ಎಂದು ಹೇಳುತ್ತಾನೆ. ಅದಕ್ಕೆ ಲಕ್ಷ್ಮಣ ಹೌದು ಅಣ್ಣ ಚಿತ್ರಕೂಟ ಪರ್ವತದಲ್ಲಿ ಅತ್ತಿಗೆ ಜೊತೆಯಲ್ಲಿದ್ದ ನೆನಪು ಬರುತ್ತಿದೆ. ನಾನು ಆಕೆಯನ್ನು ಒಂಟಿಯಾಗಿ ಬಿಟ್ಟು ನಿನ್ನನ್ನು ಹುಡುಕಲು ಬಂದು ಬಿಟ್ಟೆ ಎಂದನು. ಆಗ ಶ್ರೀರಾಮ ಮರುಗಬೇಡ ತಮ್ಮ ಆದದ್ದು ಆಗಿ ಹೋಯಿತು. ದೈವ ನಮ್ಮನ್ನು ಭ್ರಾಂತಿಗೊಳಿಸಿತು.



ಲಕ್ಷ್ಮಣ ನಾವು ದನು ಮಹರ್ಷಿ ಹೇಳಿದ ದಾರಿಯಲ್ಲಿ ಬಂದಿದ್ದೇವೆ ಅಲ್ಲವೆ? ಆತ ಹೇಳಿದ ಶಬರಿಯ ಆಶ್ರಮ ಇದೆ ಅಲ್ಲವೇ? ಅಗೋ ನೋಡು **ಆವುದೀ ಮರುಳು? ನಮ್ಮೆಡೆಗೆ ಬರುತಿಹುದು** (ಯಾವುದೋ ದೆವ್ವ ನಮ್ಮ ಕಡೆಗೆ ಬರುತ್ತಿದೆ) ಇದರ ಬಯಕೆ ಏನೆಂದು ತಿಳಿಯೋಣ ಎಂದು ಲಕ್ಷ್ಮಣನಿಗೆ ಹೇಳುತ್ತಾನೆ. ಆಗ ಲಕ್ಷ್ಮಣ ಹೌದು ಅಣ್ಣಯ್ಯ ಅದನ್ನು ಪರೀಕ್ಷಿಸುವ ಮೊದಲು ಎದುರಿಗೆ ಹೋದರೆ ಏನಾದರೂ ತೊಂದರೆ ಆಗಬಹುದು ಎಂದು ಹೇಳುತ್ತ ಮರೆಗೆ ಹೋಗುತ್ತಾರೆ.

ಇತ್ತ ಆಶ್ರಮದಲ್ಲಿ ಶಬರಿ ಶ್ರೀರಾಮನಿಗೋಸ್ಕರ ತಳಿರು, ಹೂವು, ಹಣ್ಣು–ಹಂಪಲುಗಳನ್ನು ತಲೆ, ಕಂಕುಳಲ್ಲಿ. ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದಾಳೆ. ರಾಮ ಬರದೆ ನನಗೆ ಏನು ತೋಚುತ್ತಿಲ್ಲ. ಅವನು ತಿನ್ನದ ಈ ಅತಿಸವಿಯಾದ ಹಣ್ಣುಗಳನ್ನು ಏನು ಮಾಡಲಿ, ಜೇನುತುಪ್ಪ ಅಧಿಕವಾಗಿರುವ ಈ ಮಧುಪರ್ಕವನ್ನು ನಾನು ಯಾರಿಗೆ ಕೊಡಲಿ. ಬಾ ರಾಮ ನನ್ನ ಮನದ ರಾತ್ರಿಯ ಚಂದಿರನೇ ತೆಗೆದುಕೋ ಈ ಹಣ್ಣುಗಳನ್ನು, ಈ ಹೂವುಗಳನ್ನು ಎಲ್ಲವನ್ನು ತೆಗೆದುಕೋ, ನನ್ನನ್ನು ನೀನು ಪರೀಕ್ಷೆ ಮಾಡುತ್ತಿರುವೆಯಾ. ನೀನು ಬರದೆ ನನಗೆ ಏನು ಸೇರುತ್ತಿಲ್ಲ ಎಂದು ಹಾಡುತ್ತಾ ರಾಮಧ್ಯಾನದಲ್ಲಿ ತೊಡಗಿದ್ದಾಳೆ.

ಇತ್ತ ಇದನ್ನು ಕಂಡ ಶ್ರೀರಾಮ ನನಗೋಸ್ಕರ ಇಷ್ಟೊಂದು ಹಂಬಲಿಸುವ ಈ ಜಟಿಲಕಬರಿ ಕಬಂಧ ಹೇಳಿದ ತಪಸ್ವಿನಿ ಶಬರಿಯೇ ಇರಬೇಕು. ಈಕೆಗೆ ನನ್ನಿಂದ ಸ್ವಲ್ಪವೂ ಉಪಕಾರವಿಲ್ಲ ಆದರೂ ಪ್ರೀತಿಯಿಂದ ನನ್ನನ್ನು ನೆನೆಯುತ್ತಿದ್ದಾಳೆ. **ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ** (ಈ ಪೂಜ್ಯಳ ಅನುರಾಗದಿಂದ ನಾನು ನಾಚುತಿರುವೆನು) ಎಂದು ಲಕ್ಷ್ಮಣನಿಗೆ ಹೇಳಿದಾಗ ಲಕ್ಷ್ಮಣ ಅಣ್ಣಾ ನಿನ್ನನ್ನು ನೋಡದೆ ಇಷ್ಟೊಂದು ಹುಚ್ಚಿಯಾದ ಈ ತಪಸ್ವಿನಿ ಇನ್ನು ನಿನ್ನನ್ನು ನೋಡಿದ ಬಳಿಕ ಏನಾಗುವುಳೋ ಈ ಮದುಕಿ ಎಂದು ಹೇಳುತ್ತಾನೆ.

ಆಗ ರಾಮ ಲಕ್ಷ್ಮಣನಿಗೆ ರೂಪಕ್ಕಿಂತ ನಾಮ(ಹೆಸರು) ಮಿಗಿಲಾದುದು ಅದು ಆತ್ಮದ ಕಾಮಧೇನು. ನನ್ನನ್ನು ಕಾಣುತ್ತಲೆ ಇವಳ ವಿಸ್ಮಯ ತಿಳಿಯುವುದು ಎಂದಾಗ, ಲಕ್ಷ್ಮಣ ಅಣ್ಣ ಪ್ರತಿದಿನ ನಾನು ನಿನ್ನನ್ನು ನೋಡುತ್ತಲೇ ಇರುವೆನು ಆದರೂ ನನ್ನ ವಿಸ್ಮಯ ಸಮಾಧಾನಗೊಂಡಿಲ್ಲ. ಬಾ ಇದನ್ನು ಈ ತಪಸ್ವಿನಿಯ ಆಶ್ರಮದಲ್ಲಿ ಪರೀಕ್ಷೆ ಮಾಡೋಣ ಎನ್ನುತ್ತ ಆಶ್ರಮದ ಕಡೆ ಹೋಗುತ್ತಾರೆ. ಆಗ ರಾಮ ನಡೆ ಲಕ್ಷ್ಮಣ ಮುಂದೆ ಎಂದಾಗ, ಅಣ್ಣಾ ನೀನೆ ಮುಂದೆ ಹೋಗು ನಾನು ಹಿಂದೆ ಬರುತ್ತೇನೆ. ಮೊದಲು ಅವಳ ದೃಷ್ಟಿಗೆ ನೀನು ಕಾಣಬೇಕು ಎಂದು ರಾಮನನ್ನು ಮುಂದೆ ಕಳುಹಿಸುತ್ತಾನೆ.

ಇತ್ತ ಶಬರಿ ರಾಮನಿಗೋಸ್ಕರ ಹೂವು–ಹಣ್ಣು ಹಂಪಲುಗಳನ್ನು ಹೊಂದಿಸುತ್ತ ಅವುಗಳನ್ನು ಕುರಿತು ಹೀಗೆ ಹಾಡುತ್ತಾಳೆ. "ಎಲೈ ಕೆಂಪಾದ ಚಿಗುರೇ ನಿನ್ನ ಎಳೆಯತನದ ಕೋಮಲತೆಯನ್ನು ಅವನು ಮುಟ್ಟದೆ ಬರಿ ಗಾಳಿಗೆ ಒಣಗಿರುವೆಯಲ್ಲ. ದುಂಬಿಗಳ ಸಮೂಹದ ವರ್ಣನೆಗೆ ಆಶ್ರಯವಾದ ಅರಳಿದ ಹೂವುಗಳೇ, ನಿಮ್ಮ ಸುವಾಸನೆಯಿಂದ ಅವನ ಜೀವವನ್ನು ಉತ್ತೇಜಿಸದೇ ಬಾಡಿ ಹೋಗಿರುವಿರಲ್ಲವೇ! ಅವನ ಜೀವಕ್ಕೆ ಆಹಾರವಾಗದೆ ರುಚಿ ಹದಗೆಟ್ಟು ಹುಳುವಿಗೆ ಆಸರೆಯಾದ ಎಲೆ ವನ್ಯಫಲವೇ, ಬಳಸಲಾಗದೆ ಮಾಸುವ(ಕೆಟ್ಟುಹೋಗುವ) ಇವುಗಳನ್ನು ತೆಗೆದು ಮತ್ತೆಮತ್ತೆ ಹೊಸತರಿಂದ ಸಿದ್ಧಮಾಡುವ ಈ ಛಲವೇ" ಎಂದು ಹೂಮಾಲೆಯನ್ನು ಕಟ್ಟುತ್ತಾ ಹಾಡುತ್ತಾಳೆ.

ಎಂದು ಕಾಣುವೆನೋ ರಾಮನನ್ನು ದಶರಥನ ಮಗನಂತೆ, ಸಾಧು–ಸಜ್ಜನರ ಮಿತ್ರನಂತೆ, ಧೀರ ಶೂರ ವೀರ ಗಂಭೀರ ಸದ್ಗುಣಗಳ ಸಾರನಂತೆ, ಹೆದರಿಸುವವರ ಹೆದರುವಂತೆ ಬಿಲ್ಲು ಹಿಡಿದು ಬರುವವನಂತೆ ಆದರೂ ತುಂಬ ಸೌಮ್ಯ ಸ್ವಭಾವದವನಂತೆ, ಮಗುವಿನಂತೆ ಕಾಣುವನಂತೆ, ರಾಜಪದವಿಯ ತ್ಯಾಗ ಮಾಡಿದನಂತೆ, ತಪಸ್ವಿತನವ ಹಿಡಿದನಂತೆ, ತಮ್ಮನೊಡನೆ ಕಾಡಿಗೆ ಬರಲು ಮನದಲ್ಲಿ ಭಯವೇ ಇಲ್ಲವಂತೆ, ಕೆಟ್ಟಕನಸಿನ ರಾತ್ರಿಯನ್ನು ಕಳೆಯುವ ಸುಂದರವಾದ ಬೆಳಗಿನಂಥವನು. ಗುರುಗಳು, ತಪಸ್ವಿಗಳು ಮೆಚ್ಚಿದಂತ ಸನ್ಮಂಗಳ ಮೂರ್ತಿಯನ್ನು ಎಂದು ಕಾಣುವೆನೋ ಎಂದು ಶ್ರೀರಾಮನ ಗುಣಗಾನ ಮಾಡುತ್ತಾ ಹಾಡುತ್ತಾಳೆ.

ಇದನ್ನು ನೋಡುತ್ತಾ ನಿಂತಿದ್ದ ರಾಮ ಶಬರಿಯ ಬಳಿಗೆ ಬಂದು **"ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?"** (ತಾಯಿ ಪ್ರಯಾಣಿಕರಿಗೆ ಇಲ್ಲಿ ಆಶ್ರಯ ಸಿಗುವುದೇ) ಎಂದು ಕೇಳುತ್ತಾನೆ. ಆಗ ಶಬರಿ ರಾಮನನ್ನು ವಿಸ್ಮಯದಿಂದ ನೋಡಿ ನೀನು ಮಹಾಪುರುಷ ರಾಮನೇ! ಎಂದು ಕೇಳುತ್ತಾಳೆ. ಆಗ ರಾಮ ಹೌದು ತಾಯಿ, ಹೌದು. ನನ್ನ ರಾಮ ಎನ್ನುವರು, ಈತ ನನ್ನ ತಮ್ಮ ಲಕ್ಷ್ಮಣ ಎಂದಾಗ ಶಬರಿ ಆಶ್ಚರ್ಯದಿಂದ ನೀವು ರಾಮಲಕ್ಷ್ಮಣರೇ ನೀನು ರಾಮನೇ ಎಂದು ತುಂಬಾ ಸಡಗರಗೊಂಡು ಉಪಚಾರವನ್ನು ಮಾಡುತ್ತಾಳೆ. ಮುಂದೆ ಶಬರಿಯ ಸಡಗರ, ಸಂತೋಷ ಮೇಳದವರು ಹಾಡಿನಲ್ಲಿ ವರ್ಣಿಸುತ್ತಾರೆ.



ರಾಮಲಕ್ಷ್ಮಣರು ಬಂದು ತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲಿಸಿದಳು. ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಕಾಡಿನ ಹೂವುಗಳಿಂದ ಮಾಡಿದ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೇ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಜಕುಮಾರರಾದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು. ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದವಳಾದಳು.

ರಾಮಲಕ್ಷ್ಮಣರನ್ನು ಉಪಚಾರ ಮಾಡಿದ ಶಬರಿ ತನ್ನ ಅಂತಃಸ್ಸುಖವನ್ನು ತೋರಿಸಲು ಹಾಡುತ್ತಾಳೆ. ಸುಖಿ ನಾನು ಆಸೆ ತೀರಿ ಹಾಯಾಗಿರುವೆನು. ನನ್ನ ಹಂಬಲ ಅಳಿದು ಸಂತೋಷ ತುಂಬಿದೆ. ಹೊಳೆ ಕಡಲಿಗೆ ಸೇರುವ ರೀತಿಯಲ್ಲಿ, ದೋಣಿಯು ಬಂದರಿಗೆ ಬರುವ ರೀತಿಯಲ್ಲಿ, ಬಗೆಬಗೆಯ ಪಟಗಳನ್ನು ಇಳಿಸಿ ನಿಂತಂತೆ ನನ್ನ ಮನ ಮುಕ್ತಿ ಬಯಸಿ ನಿಂತಿದೆ. ನಿಮ್ಮನ್ನು ನೋಡುತ್ತಾ, ಮಾತನಾಡಿಸುತ್ತ ಸುಖವಾಗಿದ್ದೇನೆ. ನಿಮಗಾದ ತೃಪ್ತಿ, ಆನಂದದಲ್ಲಿ ನಾನು ಸುಖವಾಗಿದ್ದೇನೆ. ಇಂದು ನನ್ನ ಮನದ ಚಿಂತೆಗಳೆಲ್ಲವೂ ಕಳೆದು ನನ್ನ ಮನ ಬಹಳ ಹಗುರವಾಗಿದೆ. ಪರಲೋಕವು ನನ್ನನ್ನು ಕರೆದುಕೊಳ್ಳಲು ತನ್ನ ಕೈಯನ್ನು ಚಾಚಿದೆ. ನಿನ್ನೆ ನಾಳೆ ಎಂಬುದೇ ನನಗಿಲ್ಲ ಈ ಆನಂದವೇ ಶಾಶ್ವತ

ಎಂಬ ರೀತಿಯಲ್ಲಿ ನಾನು ಸುಖಿಯಾಗಿದ್ದೇನೆ ಎಂದು ಹಾಡುತ್ತಾ ನರ್ತಿಸುತ್ತಾಳೆ. ಇದನ್ನು ಕಂಡ ರಾಮ ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಕಾಡಿನಲ್ಲಿ ಈ ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರಋಣಿಗಳಾಗಿದ್ದೇವೆ ಎಂದಾಗ ಶಬರಿ, ರಾಮ ನನಗೆ ಬಹಳ ಸಂತೋಷವಾಯಿತು. ಕೊನೆಗೂ ನನ್ನಾಸೆಯ ದಾರಿ ಹಿಡಿದು ಬಂದಿರಲ್ಲವೇ, ದಣಿದು ಬಂದ ನಿಮಗೆ ಈಗ ಸಮಾಧಾನವಾಯಿತಾ? ಹಸಿವು – ಬಾಯಾರಿಕೆ ನೀಗಿತಾ? ಅಯ್ಯೋ ಇವಳು ಬಡವಳು ಒಬ್ಬಳೇ ಏನು ಮಾಡುತ್ತಾಳೆ ಎಂದು ನನ್ನ ಮೇಲೆ ದಯೆ ತೋರಿದಿರಾ? ಎಂದು ಕಣ್ಣಲ್ಲಿ ನೀರು ತುಂಬಿಕೊಂಡಾಗ ರಾಮ ಇದೇಕೆ ತಾಯಿ ಕಣ್ಣೀರು ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆ ಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೆ ತಿಳಿದೆವು ಎಂದು ರಾಮ ಶಬರಿಗೆ ಹೇಳಿದಾಗ ಶಬರಿ, ರಾಮ **"ನಿನ್ನ ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"** (ನಿನ್ನ ರೂಪದಂತೆ ಮಾತು ಕೂಡ ಎಷ್ಟೊಂದು ಧಾರಾಳವಾಗಿದೆ) ನಾನು ಇಂದು ಧನ್ಯಳಾಗಿದ್ದೇನೆ. ಮತಂಗ ತಪಸ್ವಿಗಳ ನೀಡಿದ ವರ ಇಂದು ನನಗೆ ಫಲ ನೀಡಿದೆ. ನಿಮ್ಮನ್ನು ಕಂಡ ಪುಣ್ಯವಂತೆ ನಾನು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು. ಗುರುವನ್ನು ಪೂಜೆ ಮಾಡಿದ ತೃಪ್ತಿ ನನಗೆ ದೊರೆಕಿತು ಎಂದು ಸಂತೋಷ ಪಡುತ್ತಾಳೆ. ಆಗ ರಾಮ ಇಂತಹ ಶಿಷ್ಯೆಯ ಪ್ರೀತಿಯನ್ನು ಪಡೆದ ನಿನ್ನ ಗುರುಗಳು ಎಂಥವರೋ, ಅವರ ಮಹಿಮೆಯನ್ನು ಕೇಳಿ ತಿಳಿದಿರುವೆನು. ಎಂತಹ ಶಾಂತಿ, ಸಂಯಮವುಳ್ಳವರು. ದುಃಖವನ್ನೆಲ್ಲ ಮರೆಸಿ ಶಾಂತಿಯನ್ನು ತೋರುವ ಈ ಕಾಡು. ಇದರ ಮಧ್ಯೆ ನೀನು ಶುದ್ಧವಾದ ಪ್ರೇಮವುಳ್ಳವಳು. ಇದೊಂದು ಒಳ್ಳೆಯ ದಿನ ಮರೆಯಲಾಗದು ಎಂದು ಹೇಳಿದನು. ಆಗ ಶಬರಿ ನನ್ನ ಹೊಗಳುವುದು ಏಕೆ ರಾಮ. ಇದೆಲ್ಲ ಆ ಮತಂಗ ಗುರುಗಳು ತೋರಿದ ಕರುಣೆ. ನೀವು ಇಲ್ಲಿಗೆ ಪಾದ ಬೆಳಸಿ ನನ್ನ ಕಂಡ ಕರುಣೆ. ನೀವು ಬರುವಿರಿ ನಿಮ್ಮ ಕಂಡಾಗ ಒಳಿತಾಗುವುದು ಎಂದು ಸಿದ್ಧರಾದ ಮತಂಗ ಋಷಿಗಳು ಹೇಳಿದ ಮಾತು ನನಗೆ ಇಂದು ಸಿದ್ಧಿಸಿತು ಎಂದು ಹಾಡಲು ಪ್ರಾರಂಭಿಸುತ್ತಾಳೆ.

ಕೋಟಿಕಿರಣಗಳಿಂದ ರವಿ ಎತ್ತಿರುವ ಆಕಾಶದ ಆಚೆ(ಕೈಲಾಸದತ್ತ) ನನ್ನ ಗಮನ ಹೋಗುತ್ತಿದೆ. ನನಗೆ ಈ ಲೋಕದಿಂದ ಹೊರಗೆ (ಕೈಲಾಸಕ್ಕೆ, ಮುಕ್ತಿಗೆ) ಪ್ರಯಾಣ ಹೋಗಬೇಕಿನಿಸುತ್ತಿದೆ. ಹಕ್ಕಿಗಳಂತೆ ಹಾರುವ ಆಸೆಯಾಗಿದೆ. ಬಿಳಿಮೋಡಗಳಂತೆ ತೇಲುವ ಆಸೆಯಾಗಿದೆ. ಕಪ್ಪುಮೋಡದಲ್ಲಿ ಬರುವ ಸೆಳೆ ಮಿಂಚಿನಂತೆ ಪ್ರಾಣ ಬಿಡಲು ಬಯಸಿರುವೆನು ಎಂದು ತನ್ನ ಆಸೆಯನ್ನು ಹೇಳಿದಳು. ಆಗ ರಾಮ, ತಾಯಿ ನಮ್ಮನ್ನು ಗೌರವಿಸುತ ಬಳಿಕ ಈ ರೀತಿ ಮಾತನಾಡುವುದು, ಆಲೋಚಿಸುವುದು ಸರಿಯೇ!! ಎಂದಾಗ, ಶಬರಿ **"**ರಾಮ ಪುಣ್ಯಲೋಕ ದೊರೆಯಲೆಂದು ನನಗೆ ಹರಕೆಯನ್ನು ಇಡು**"** ಎನ್ನುತ್ತಾಳೆ. ತಕ್ಷಣ ರಾಮ ಇಷ್ಟೊಂದು ಪ್ರೀತಿಯ ತೋರಿದ ನಿನಗೆ ಮರಣವೇ ನಮ್ಮ ಕಾಣಿಕೆ !! ಎನ್ನುತ್ತಾನೆ. ಆಗ ಶಬರಿ ಮರಣವಲ್ಲ ಪ್ರಭು ಮುಕ್ತಿ ಕರುಣಿಸು. ಇದುವೇ ನನ್ನ ಸಂಕಲ್ಪ ಎನ್ನುತ್ತಾಳೆ. ಆಗ ರಾಮ ನನ್ನ ಮನಸ್ಸು ಒಪ್ಪಿದರೂ ಹೃದಯ ಒಪ್ಪುತ್ತಿಲ್ಲವಲ್ಲ ಎಂದಾಗ ಶಬರಿ ನೀನು ಒಲಿದು ಒಪ್ಪಿದಿರೆ ಸ್ವರ್ಗ ತಪ್ಪುವುದಿಲ್ಲ ಎನ್ನುತ್ತಾಳೆ.

ಆಗ ರಾಮ ನಿನ್ನ ಮಾತಿಗೆ ಬೆರಗಾಗಿ ಇರುವೆನು. ಆಗಲಿ ತಾಯಿ ನಿನ್ನ ಬಯಕೆಯಂತೆ ಮೋಕ್ಷಕ್ಕೆ ಹೋಗುವಂತಾಗಲಿ. ಆಗ ಶಬರಿ ಆಗಲಿ ರಾಮ ನಮಸ್ಕಾರ, ನಿಮಗೆ ನಮಸ್ಕಾರ ಈ ಕಾಡಿಗೆ ನಮಸ್ಕಾರ ಈ ಬೆಟ್ಟಕ್ಕೆ ನಮಸ್ಕಾರ, ಎಲ್ಲರಿಗೂ, ಎಲ್ಲದಕ್ಕೂ ನಮಸ್ಕಾರ ಹೇಳುತ್ತಾ ಮೋಕ್ಷಕ್ಕೆ ಪ್ರಾಪ್ತಳಾಗುತ್ತಾಳೆ.

ನಂತರ ರಾಮ ಹೆಣ್ಣಿನ ರೀತಿಯನ್ನು ತಿಳಿಯಬಹುದೆ? ಅವರ ಮನಸ್ಸು ಬಹಳ ಆಶ್ಚರ್ಯಕರವಾದದು. ಆಹಾ ! ಎಂಥಹ ನಿಷ್ಠೆ, ಎಂಥಹ ಪ್ರೀತಿ. ಈ ಪ್ರಪಂಚ ಶಬರಿಯನ್ನು ಮರೆಯುವುದು ಸಾಧ್ಯವಿಲ್ಲ ಎಂದಾಗ ಲಕ್ಷ್ಮಣ ಅಣ್ಣಾ ಶಬರಿ ಯಾರು, ಎತ್ತ, ಏಕೆ ಎನ್ನದೆ ಮಗುವಿನಂತೆ ಇಷ್ಟವಾದಳು. ನಮ್ಮನ್ನು ನೋಡುತ್ತಲೆ ಬಹಳ ಆನಂದ ಪಟ್ಟಳು. ಆ ಆನಂದಲ್ಲಿ ನಮ್ಮನ್ನೆ ಮರೆತಳು ಎಂದು ಶಬರಿಯ ಗುಣಗಾನ ಮಾಡಿದಾಗ ರಾಮ ಹೀಗೆ ಹೇಳುತ್ತಾನೆ, ಲಕ್ಷ್ಮಣ **"ಬೆಳಕಿಗೆ ಒಲಿದವರ್ ಉರಿವ ಬತ್ತಿಯ ಕರುಕ ಕಾಣರು"** (ಬೆಳಕನ್ನು ಇಷ್ಟಪಡುವವರು ಉರಿಯುವ ಬತ್ತಿಯ ಕಪ್ಪನ್ನು ಅಂದರೆ ಬತ್ತಿ ಉರಿದು ಉಳಿದ ಕಪ್ಪಾದ ಭಾಗ ನೋಡುವುದಿಲ್ಲ.) ಅದೇ ರೀತಿ ಬಾಳನ್ನು ಸುತ್ತಿರುವ ದೇವ ತೇಜಸ್ಸನ್ನು ಕಾಣವವರಿಗೆ ಇದೆ ಲಕ್ಷಣವಿರುತ್ತದೆ ಎಂದು ಹೇಳುತ್ತಾನೆ. ಆಗ ಲಕ್ಷ್ಮಣ ಅಣ್ಣಾ ನಾವು ರಾಕ್ಷಸರ ತೊಂದರೆಯಿಂದ ಹೋರಾಡುವಾಗ ತನ್ನ ಕಡೆಗೆ ನಮ್ಮನ್ನು ಸೆಳೆದ ಈ ಪ್ರೀತಿಗೆ ಏನು ಹೇಳುವುದು. ಈ ರೀತಿಯೇ ನಮ್ಮನ್ನು ಅತ್ತಿಗೆ ನೆನೆಯುತ್ತಿರಬಹುದು ಎಂದು ಸೀತೆಯನ್ನು ನೆನೆದಾಗ ರಾಮ ಇರಬಹುದು ಇರಬಹುದು–ಹಾ ಸೀತೇ ಪ್ರಿಯೆ ಚಂದ್ರಮುಖದವಳೆ ಎಲ್ಲಿರುವೆ, ಹೇಗಿರುವೇ ನಿನ್ನನ್ನು ಜೀವಸಹಿತ ಕಾಣುವೆನೇ? ಎಂದು ದುಃಖಿಸುತ್ತಾನೆ. ಆಗ ಲಕ್ಷ್ಮಣ ಅಣ್ಣಾ ಭೂಮಿ ತಾಯಿಯು ತನ್ನ ಮಗಳನ್ನು ಎಲ್ಲೆ ಇರಲಿ ಅದೆ ತನ್ನ ತವರು ಮನೆ ಎಂದು ಕಾಪಾಡುವಳಲ್ಲವೇ. ಧೈರ್ಯವನ್ನು ತಂದುಕೋ, ಮುಂದೆ ಏನು ಮಾಡಬೇಕು ಎಂಬ ಉಪಾಯವನ್ನು ಯೋಚಿಸು ಎಂದಾಗ ರಾಮ ಹೌದು ಲಕ್ಷ್ಮಣ ಪಂಚಭೂತಗಳಲ್ಲಿ ಬೆರೆಯುತ ಶಬರಿ ಸೀತೆಗೆ ರಕ್ಷಣೆ ಮಾಡಲಿ. ಬಾ ಸಹಾಯವನ್ನು ಹುಡುಕುತ್ತ ಹೋಗೋಣ ಎಂದು ಸೀತೆಯನ್ನು ಹುಡುಕುತ್ತಾ ಹೋಗುತ್ತಾರೆ.

## ಅಭ್ಯಾಸ ಪ್ರಶ್ನೋತ್ತರಗಳು

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.

**1. ಶ್ರೀರಾಮನ ತಂದೆಯ ಹೆಸರೇನು?**

**ಉತ್ತರ:** ಶ್ರೀರಾಮನ ತಂದೆಯ ಹೆಸರು ದಶರಥ.

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**

**ಉತ್ತರ:** ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ರುಚಿಕರವಾದ ಹಣ್ಣುಹಂಪಲುಗಳು ಮತ್ತು ಮಧುಪರ್ಕ ಎಂಬ ಪಾನಿಯವನ್ನು ಸಂಗ್ರಹಿಸಿದ್ದಳು.

**3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**

**ಉತ್ತರ:** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

**4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**

**ಉತ್ತರ:** ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು ಮಹರ್ಷಿ.

**5. ಶಬರಿ ಗೀತನಾಟಕದ ಕರ್ತೃ ಯಾರು?**
**ಉತ್ತರ:** ಶಬರಿ ಗೀತನಾಟಕದ ಕರ್ತೃ ಪು.ತಿ. ನರಸಿಂಹಾಚಾರ್ಯರು.

## ಹೆಚ್ಚುವರಿ ಪ್ರಶ್ನೋತ್ತರಗಳು

**6. ಭೂಮಿಜಾತೆ ಎಂದರೆ ಯಾರು?**
**ಉತ್ತರ:** ಭೂಮಿಜಾತೆ ಎಂದರೆ ಸೀತೆ.
**7. ಶಬರಿ ಯಾರಿಗಾಗಿ ಕಾದಿದ್ದಳು?**
**ಉತ್ತರ:** ಶಬರಿ ಶ್ರೀರಾಮನಿಗಾಗಿ ಕಾದಿದ್ದಳು.
**8. ಯಾರೊಡನೆ ಕಾಡಿಗೆ ಬರಲು ಶ್ರೀರಾಮನಿಗೆ ಭಯವಿಲ್ಲ?**
**ಉತ್ತರ:** ಲಕ್ಷ್ಮಣನೊಡನೆ ಕಾಡಿಗೆ ಬರಲು ಶ್ರೀರಾಮನಿಗೆ ಭಯವಿಲ್ಲ.
**9. ಶಬರಿಗೆ ಯಾರ ವರ ಫಲಿಸಿತು?**
**ಉತ್ತರ:** ಶಬರಿಗೆ ಸಿದ್ಧರ ವರ ಫಲಿಸಿತು.
**10. ಶಬರಿಯ ಪುಣ್ಯಕ್ಕೆ ಏನಾಗಿತ್ತು?**
**ಉತ್ತರ:** ಶಬರಿಯ ಪುಣ್ಯಕ್ಕೆ ಮುಕ್ತಿ ಬಯಸುವುದಾಗಿತ್ತು.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**
**ಉತ್ತರ:** ರಾಮನು "ಎಲೈ ಗಿರಿ ವನವೇ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ ಹೇಳಿರಿ ನನ್ನ ಪ್ರೀತಿಯ ರಾಣಿ ಸೀತೆಯು ದೊರೆಯುವಳೇ? ದೊರೆಯುವುದಿಲ್ಲವೋ? ಅವಳು ಇರುವ ನೆಲೆ ಯಾರಾದರೂ ತಿಳಿದಿರುವಿರಾ. ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ." ಎಂದು ಗಿರಿವನಗಳನ್ನು ಪ್ರಾರ್ಥಿಸುತ್ತಾನೆ.

**2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.**
**ಉತ್ತರ:** ಲಕ್ಷ್ಮಣನು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಅಣ್ಣನನ್ನು ಸಂತೈಸಿದನು.

**3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**
**ಉತ್ತರ:** ರಾಮನ ಸ್ವಾಗತಕ್ಕಾಗಿ ಶಬರಿ ಕಡುಸವಿಯಾದ ಬಗೆಬಗೆಯ ಹಣ್ಣು – ಹಂಪಲುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ತಳಿರು, ಸುವಾಸನೆಯಿಂದ ಕೂಡಿದ ಹೂವುಗಳನ್ನು ಸಂಗ್ರಹಿಸಿ ಸಿದ್ಧತೆ ಮಾಡಿಕೊಂಡಿದ್ದಳು.

**4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**
**ಉತ್ತರ:** ರಾಮ-ಲಕ್ಷ್ಮಣರು ಬಂದು ತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲದಿಂದ ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಹೂಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟು ಉಪಚರಿಸಿದಳು.

**5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?**
**ಉತ್ತರ:** ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು "ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಕಾಡಿನಲ್ಲಿ ಈ ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರಋಣಿಗಳಾಗಿದ್ದೇವೆ. ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರೆತ ಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೆ ತಿಳಿದೆವು" ಎಂದು ಶಬರಿಗೆ ಹೇಳಿದರು.

## ಹೆಚ್ಚುವರಿ ಪ್ರಶ್ನೋತ್ತರಗಳು

**6. ಶಬರಿ ಶ್ರೀರಾಮನ ಗುಣಗಾನಗಳನ್ನು ಹೇಗೆ ಹಾಡಿ ಹೊಗಳಿದಳು?**
**ಉತ್ತರ:** "ದಶರಥನ ಮಗನಂತೆ, ಸಾಧು-ಸಜ್ಜನರ ಮಿತ್ರನಂತೆ, ಧೀರ ಶೂರ ವೀರ ಗಂಭೀರ ಸದ್ಗುಣಗಳ ಸಾರನಂತೆ, ಹೆದರಿಸುವವರ ಹೆದರುವಂತೆ ಬಿಲ್ಲು ಹಿಡಿದು ಬರುವನಂತೆ ಆದರೂ ತುಂಬ ಸೌಮ್ಯ ಸ್ವಭಾವದವನಂತೆ, ಮಗುವಿನಂತೆ ಕಾಣುವನಂತೆ, ರಾಜಪದವಿಯ ತ್ಯಾಗ ಮಾಡಿದನಂತೆ, ತಪಸ್ವಿತನವ ಹಿಡಿದನಂತೆ, ತಮ್ಮನೊಡನೆ ಕಾಡಿಗೆ ಬರಲು ಮನದಲ್ಲಿ ಭಯವೇ ಇಲ್ಲವಂತೆ, ಕೆಟ್ಟಕನಸಿನ ರಾತ್ರಿಯನ್ನು ಕಳೆಯುವ ಸುಂದರವಾದ ಬೆಳಗಿನಂಥವನು. ಗುರುಗಳು, ತಪಸ್ವಿಗಳು ಮೆಚ್ಚಿದಂತ ಸನ್ಮಂಗಳ ಮೂರ್ತಿಯನ್ನು ಎಂದು ಕಾಣುವೆನೋ" ಎಂದು ಶಬರಿ ಶ್ರೀರಾಮನ ಗುಣಗಾನ ಮಾಡುತ್ತಾ ಹಾಡಿ ಹೊಗಳಿದಳು.

**7. ಶಬರಿ ರಾಮನಿಗೋಸ್ಕರ ತಂದಿರುವ ಹೂ ಹಣ್ಣು ತಳಿರುಗಳನ್ನು ಉದ್ದೇಶಿಸಿ ಯಾವ ತೆರನಾಗಿ ಹಾಡುತ್ತಾಳೆ?**

**ಉತ್ತರ:** ಶಬರಿ ರಾಮನಿಗೋಸ್ಕರ ಹೂವು-ಹಣ್ಣು ಹಂಪಲುಗಳನ್ನು ಹೊಂದಿಸುತ್ತ ಅವುಗಳನ್ನು ಉದ್ದೇಶಿಸಿ "ಎಲೈ ಕೆಂಪಾದ ಚಿಗುರೇ ನಿನ್ನ ಎಳೆಯತನದ ಕೋಮಲತೆಯನ್ನು ಅವನು ಮುಟ್ಟದೆ ಬರಿ ಗಾಳಿಗೆ ಒಣಗಿರುವೆಯಲ್ಲ. ದುಂಬಿಗಳ ಸಮೂಹದ ವರ್ಣನೆಗೆ ಆಶ್ರಯವಾದ ಅರಳಿದ ಹೂವುಗಳೇ, ನಿಮ್ಮ ಸುವಾಸನೆಯಿಂದ ಅವನ ಜೀವವನ್ನು ಉತ್ತೇಜಿಸದೇ ಬಾಡಿ ಹೋಗಿರುವಿರಲ್ಲವೇ! ಅವನ ಜೀವಕ್ಕೆ ಆಹಾರವಾಗದೆ ರುಚಿ ಹದಗೆಟ್ಟು ಹುಳುವಿಗೆ ಆಸರೆಯಾದ ಎಲೆ ವನ್ಯಫಲವೇ" ಎಂಬ ತೆರನಾಗಿ ಹಾಡುತ್ತಾಳೆ.

**8. ರಾಮಲಕ್ಷ್ಮಣರನ್ನು ಉಪಚಾರ ಮಾಡಿದ ಶಬರಿ ತನ್ನ ಅಂತಸ್ಸುಖವನ್ನು ತೋರಿಸಲು ಹೇಗೆ ಹಾಡುತ್ತಾಳೆ?**

**ಉತ್ತರ:** ರಾಮಲಕ್ಷ್ಮಣರನ್ನು ಉಪಚಾರ ಮಾಡಿದ ಶಬರಿ ತನ್ನ ಅಂತಸ್ಸುಖವನ್ನು ತೋರಿಸಲು "ಸುಖಿ ನಾನು ಆಸೆ ತೀರಿ ಹಾಯಾಗಿರುವೆನು. ನನ್ನ ಹಂಬಲ ಅಳಿದು ಸಂತೋಷ ತುಂಬಿದೆ. ಹೊಳೆ ಕಡಲಿಗೆ ಸೇರುವ ರೀತಿಯಲ್ಲಿ, ದೋಣಿಯು ಬಂದರಿಗೆ ಬರುವ ರೀತಿಯಲ್ಲಿ, ಬಗೆಬಗೆಯ ಪಟಗಳನ್ನು ಇಳಿಸಿ ನಿಂತಂತೆ ನನ್ನ ಮನ ಮುಕ್ತಿ ಬಯಸಿ ನಿಂತಿದೆ. ನಿಮ್ಮನ್ನು ನೋಡುತ್ತಾ, ಮಾತನಾಡಿಸುತ್ತ ಸುಖವಾಗಿದ್ದೇನೆ. ನಿಮಗಾದ ತೃಪ್ತಿ, ಆನಂದದಲ್ಲಿ ನಾನು ಸುಖವಾಗಿದ್ದೇನೆ. ಇಂದು ನನ್ನ ಮನದ ಚಿಂತೆಗಳೆಲ್ಲವೂ ಕಳೆದು ನನ್ನ ಮನ ಬಹಳ ಹಗುರವಾಗಿದೆ. ಪರಲೋಕವು ನನ್ನನ್ನು ಕರೆದುಕೊಳ್ಳಲು ತನ್ನ ಕೈಯನ್ನು ಚಾಚಿದೆ. ನಿನ್ನೆ ನಾಳೆ ಎಂಬುದೇ ನನಗಿಲ್ಲ ಈ ಆನಂದವೇ ಶಾಶ್ವತ ಎಂಬ ರೀತಿಯಲ್ಲಿ ನಾನು ಸುಖಿಯಾಗಿದ್ದೇನೆ" ಎಂದು ಹಾಡುತ್ತಾಳೆ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.**

**ಉತ್ತರ:** ಶಬರಿ ಶ್ರೀರಾಮನ ದರ್ಶನದ ಚಿಂತೆಯಲ್ಲಿ ಇದ್ದಾಗ ಒಂದು ದಿನ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. ರಾಮನನ್ನು ಕಂಡು ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ತನ್ನ ಮನದ ಬಯಕೆಯಂತೆ ಹೂ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು. ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದವಳಾದಳು. ಸುಖಿ ನಾನು ಆಸೆ ತೀರಿ ಹಾಯಾಗಿರುವೆನು. ನನ್ನ ಹಂಬಲ ಅಳಿದು ಸಂತೋಷ ತುಂಬಿದೆ. ನನ್ನ ಮನ ಮುಕ್ತಿ ಬಯಸಿ ನಿಂತಿದೆ. ಎಂದು ಹಾಡುತ್ತಾ ನರ್ತಿಸುತ್ತಾಳೆ. ಇದನ್ನು ಕಂಡ ರಾಮ ತಾಯಿ ನಿನ್ನ ಪ್ರೀತಿಯಲ್ಲಿ, ನಿನ್ನ ಸುಖದಲ್ಲಿ ನಾವು ಸುಖಿಗಳಾಗಿದ್ದೇವೆ. ಆನಂದ ಕಾಣುವ ಪುಣ್ಯಕ್ಕೆ ಎಂದೆಂದಿಗೂ ನಿನಗೆ ನಾವು ಚಿರಋಣಿಗಳಾಗಿದ್ದೇವೆ ಎಂದಾಗ ಶಬರಿ. ರಾಮ ನನಗೆ ಬಹಳ ಸಂತೋಷವಾಯಿತು. ಕೊನೆಗೂ ನನ್ನಾಸೆಯ ದಾರಿ ಹಿಡಿದು ಬಂದಿರಲ್ಲವೇ, ದಣಿದು ಬಂದ ನಿಮಗೆ ಈಗ ಸಮಾಧಾನವಾಯಿತಾ? ಹಸಿವು – ಬಾಯಾರಿಕೆ ನೀಗಿತಾ? ಅಯ್ಯೋ ಇವಳು ಬಡವಳು ಒಬ್ಬಳೇ ಏನು ಮಾಡುತ್ತಾಳೆ ಎಂದು ನನ್ನ ಮೇಲೆ ದಯೆ ತೋರಿದಿರಾ ? ಎಂದಾಗ ತಾಯಿ ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆ ಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೆ ತಿಳಿದೆವು. ಎಂದು ರಾಮ ಶಬರಿಗೆ ಹೇಳಿದಾಗ ಶಬರಿ" ನಿನ್ನ ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!" ನಾನು ಇಂದು ಧನ್ಯಳಾಗಿದ್ದೇನೆ. ಮತಂಗ ತಪಸ್ವಿಗಳ ನೀಡಿದ ವರ ಇಂದು ನನಗೆ ಫಲ ನೀಡಿದೆ. ನಿಮ್ಮನ್ನು ಕಂಡ ಪುಣ್ಯವಂತೆ ನಾನು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ.

**2. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?**

**ಉತ್ತರ:** ರಾಮಲಕ್ಷ್ಮಣರು ಬಂದು ತನ್ನ ಮುಂದೆ ನಿಂತಿರುವುದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲಿಸಿದಳು. ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಕಾಡಿನ ಹೂವುಗಳಿಂದ ಮಾಡಿದ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟಳು. ಶಬರಿಯ ಆತಿಥ್ಯದಿಂದ ರಾಜಕುಮಾರರಾದ ರಾಮಲಕ್ಷ್ಮಣರು ಸುಪ್ರಸನ್ನರಾಗಿ ಮಂದಹಾಸ ತೋರಿದರು. ಇದನ್ನು ನೋಡಿದ ಶಬರಿ ಧನ್ಯತಾಭಾವದಿಂದ ಕೂಡಿದವಳಾದಳು. ಹೀಗೆ ಶಬರಿಯ ಸಡಗರ, ಸಂತೋಷವನ್ನು ಮೇಳದವರು ಹಾಡಿನಲ್ಲಿ ವರ್ಣಿಸುತ್ತಾರೆ.

**3. ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?**

**ಉತ್ತರ:** ಶಬರಿ ಬೇಡರಾಜನ ಮಗಳು. ಆಕೆ ಮತಂಗಾಶ್ರಮದಲ್ಲಿ ಬಂದು ಇದ್ದಳು. ಮತಂಗ ಋಷಿಗಳು ಪ್ರತಿನಿತ್ಯ ದಶರಥ ಪುತ್ರನಾದ ಶ್ರೀರಾಮನ ಗುಣ ಸ್ವಭಾವಗಳನ್ನು ಹಾಡಿ ಹೊಗಳುತಿರುತ್ತಾರೆ. ಇದರಿಂದ ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂಬ ಹಂಬಲದಲ್ಲಿ ಇರುತ್ತಾಳೆ. ಮತಂಗ ಋಷಿಗಳು ಶಬರಿಯ ಮನದ ಹಂಬಲವನ್ನು ತಿಳಿದು ಇಲ್ಲಿಗೆ ಶ್ರೀರಾಮ ಬಂದೇ ಬರುತ್ತಾನೆ ಅವನ ದರ್ಶನ ಪಡೆದರೆ ಮುಕ್ತಿ ಸಿಗುತ್ತದೆ ಎಂದು ಹೇಳಿದ್ದರು. ಅದರಂತೆ ಶಬರಿ ಮತಂಗ ಋಷಿಗಳ ಮಾತನ್ನು ನಂಬಿ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು. ಮತಂಗ ಋಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು. ಶ್ರೀರಾಮಗಾಗಿ ದಿನಾಲೂ ಹೂ-ಹಣ್ಣುಹಂಪಲುಗಳನ್ನು ತಂದು ಇಟ್ಟುಕೊಂಡು ರಾಮ ಇವತ್ತು ಬರುವನೋ ನಾಳೆ ಬರುವುನೋ ಎಂಬ ಚಿಂತೆಯಲ್ಲಿ ಇರುತ್ತಾಳೆ. ಮತಂಗರ ಮಾತಿನಂತೆ ಒಂದು ದಿನ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. ಶಬರಿ ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ತನ್ನ ಮನದ ಬಯಕೆಯಂತೆ ಹೂಮಾಲೆಯನ್ನು ಹಾಕಿ, ಹಣ್ಣು-ಹಂಪಲುಗಳನ್ನು ಕೊಟ್ಟು ತನ್ನ ಮನದ ಬಯಕೆಯನ್ನು ಈಡೇರಿಸಿಕೊಂಡು ಧನ್ಯಳಾಗುತ್ತಾಳೆ. ಮುಕ್ತಿಯನ್ನು ಪಡೆಯುತ್ತಾಳೆ. ಹೀಗೆ ತಾಳುವಿಕೆಗಿಂತ ತಪವಿಲ್ಲ ಎನ್ನುವ ಹಾಗೆ ಶಬರಿ ಶ್ರೀರಾಮನಿಗೋಸ್ಕರ ಕಾದು ಕೆಡಲಿಲ್ಲ. ಆದ್ದರಿಂದ ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ.

## ಹೆಚ್ಚುವರಿ ಪ್ರಶ್ನೋತ್ತರಗಳು

**4. ಶಬರಿಯು ರಾಮಲಕ್ಷ್ಮಣರಿಗೆ ಮಾಡಿದ ಉಪಚಾರದೊಂದಿಗೆ ತನ್ನ ಅಂತಸ್ಸುಖವನ್ನು ಹೇಗೆ ತೋರ್ಪಡಿಸಿದಳು ಎಂಬುದನ್ನು ವಿವರಿಸಿ?**

**ಉತ್ತರ:** ರಾಮ–ಲಕ್ಷ್ಮಣರು ಬಂದು ತನ್ನ ಮುಂದೆ ನಿಂತಿರುವದನ್ನು ಕಂಡು ಶಬರಿ ಬೆರಗಾದಳು. ಬೆರಗು ಕಳೆದ ಮೇಲೆ ರಾಮನ ಹತ್ತಿರಕ್ಕೆ ಬಂದು ಮೈಯನ್ನು ಮುಟ್ಟಿ ಪಾದಕ್ಕೆ ಬಿದ್ದಳು. ಕೈಯನ್ನು ಕಣ್ಣಿಗೆ ಒತ್ತಿಕೊಂಡು ಆನಂದದ ಕಣ್ಣೀರನ್ನು ಸುರಿಸಿದಳು. ಬನ್ನಿರಿ ಎಂದು ಗದ್ಗದಿಸುತ್ತಾ ಅಯ್ಯೋ ಏನೂ ಸಿದ್ಧವೇ ಇಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತ ಬಹಳ ಹಂಬಲದಿಂದ ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯನ್ನು ಬೀರುವ ಹೂಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂಭ್ರಮಿಸಿದಳು. ತಾನು ತಂದಿದ್ದ ರುಚಿಯಾದ ಹಣ್ಣುಗಳನ್ನು ತಾನೆ ರಾಮಲಕ್ಷ್ಮಣರ ಕೈಯೊಳಗೆ ಇಟ್ಟು ಜಗದೊಳಗೆ ಇದರಷ್ಟು ರುಚಿಯಾದ ಹಣ್ಣು ಯಾವುದು ಇಲ್ಲ, ನಿಮಗಾಗಿಯೇ ತಂದಿರುವೆನು ಎಂದು ತಿನ್ನಲು ಹೇಳಿದಳು. ಮಧುಪರ್ಕವನ್ನು ಸವಿಯಲು ಕೊಟ್ಟು ಉಪಚರಿಸಿದಳು. ಹೀಗೆ ರಾಮಲಕ್ಷ್ಮಣರನ್ನು ಉಪಚಾರ ಮಾಡಿದ ಶಬರಿ ತನ್ನ ಅಂತಸ್ಸುಖವನ್ನು ತೋರಿಸಲು "ಸುಖಿ ನಾನು ಆಸೆ ತೀರಿ ಹಾಯಾಗಿರುವೆನು. ನನ್ನ ಹಂಬಲ ಅಳಿದು ಸಂತೋಷ ತುಂಬಿದೆ. ಹೊಳೆ ಕಡಲಿಗೆ ಸೇರುವ ರೀತಿಯಲ್ಲಿ, ದೋಣಿಯು ಬಂದರಿಗೆ ಬರುವ ರೀತಿಯಲ್ಲಿ, ಬಗೆಬಗೆಯ ಪಟಗಳನ್ನು ಇಳಿಸಿ ನಿಂತಂತೆ ನನ್ನ ಮನ ಮುಕ್ತಿ ಬಯಸಿ ನಿಂತಿದೆ. ನಿಮ್ಮನ್ನು ನೋಡುತ್ತಾ, ಮಾತನಾಡಿಸುತ್ತ ಸುಖವಾಗಿದ್ದೇನೆ. ನಿಮಗಾದ ತೃಪ್ತಿ, ಆನಂದದಲ್ಲಿ ನಾನು ಸುಖವಾಗಿದ್ದೇನೆ. ಇಂದು ನನ್ನ ಮನದ ಚಿಂತೆಗಳೆಲ್ಲವೂ ಕಳೆದು ನನ್ನ ಮನ ಬಹಳ ಹಗುರವಾಗಿದೆ. ಪರಲೋಕವು ನನ್ನನ್ನು ಕರೆದುಕೊಳ್ಳಲು ತನ್ನ ಕೈಯನ್ನು ಚಾಚಿದೆ. ನಿನ್ನೆ ನಾಳೆ ಎಂಬುದೇ ನನಗಿಲ್ಲ ಈ ಆನಂದವೇ ಶಾಶ್ವತ ಎಂಬ ರೀತಿಯಲ್ಲಿ ನಾನು ಸುಖಿಯಾಗಿದ್ದೇನೆ" ಎಂದು ಹಾಡುತ್ತಾ ತನ್ನ ಅಂತಸ್ಸುಖವನ್ನು ತೋರ್ಪಡಿಸಿದಳು.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."**

**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ವಾಕ್ಯವನ್ನು ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ. ಸೀತಾಪಹರಣದನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಬರುವಾಗ ತಪಸ್ವಿ ದನು ಮಹರ್ಷಿಗಳು ಸಿಗುತ್ತಾರೆ. ಅವರು ಶಬರಿಯ ವೃತ್ತಾಂತವನ್ನು ಹೇಳಿ ಶಬರಿ ಇರುವ ಮತಂಗಾಶ್ರಮಕ್ಕೆ ಹೋಗಲು ಸೂಚಿಸುತ್ತಾರೆ. ಅವರ ಸೂಚನೆಯಂತೆ ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು) ಕಂಡ ರಾಮನು ಅಗೋ ನೋಡು ಲಕ್ಷ್ಮಣ **"ಆವುದೀ ಮರುಳು? ನಮ್ಮೆಡೆಗೆ ಬರುತಿಹುದು"** ಇದರ ಬಯಕೆ ಏನೆಂದು ತಿಳಿಯೋಣ ಎಂದು ಲಕ್ಷ್ಮಣನಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಶ್ರೀರಾಮನ ದರ್ಶನಕ್ಕಾಗಿ ಕಾದು, ಕಾತರಿಸಿ, ಹುಚ್ಚಿಯಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

**2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**

**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ. ಶಬರಿ ಶ್ರೀರಾಮನಿಗೋಸ್ಕರ ತಳಿರು, ಹೂವು, ಹಣ್ಣು–ಹಂಪಲುಗಳನ್ನು ಕೊಂಡು ಬರುವಾಗ ಅವನು ತಿನ್ನದ ಈ ಅತಿಸವಿಯಾದ ಹಣ್ಣುಗಳನ್ನು ಏನು ಮಾಡಲಿ, ಈ ಮಧುಪರ್ಕವನ್ನು ನಾನು ಯಾರಿಗೆ ಕೊಡಲಿ. ನೀನು ಬರದೆ ನನಗೆ ಏನು ಸೇರುತ್ತಿಲ್ಲ ಎಂದು ಹಾಡುತ್ತಾ ರಾಮಧ್ಯಾನದಲ್ಲಿ ತೊಡಗಿದ್ದಾಳೆ. ಇದನ್ನು ಕಂಡ ಶ್ರೀರಾಮ ನನಗೋಸ್ಕರ ಇಷ್ಟೊಂದು ಹಂಬಲಿಸುವ ಈ ಜಟಿಲಕಬರಿಗೆ ನನ್ನಿಂದ ಸ್ವಲ್ಪವೂ ಉಪಕಾರವಿಲ್ಲ ಆದರೂ ಪ್ರೀತಿಯಿಂದ ನನ್ನನ್ನು ನೆನೆಯುತ್ತಿದ್ದಾಳೆ. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ" ಎಂದು ಲಕ್ಷ್ಮಣನಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು ಈ ಪೂಜ್ಯಳ ಅನುರಾಗದಿಂದ ನಾನು ನಾಚುತಿರುವೆನು ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

**3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?"**

**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ಮಾತನ್ನು ರಾಮನು ಶಬರಿಗೆ ಕೇಳಿದನು. ರಾಮಲಕ್ಷ್ಮಣರು ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಶಬರಿಯು "ಎಂದು ಕಾಣುವೆನೋ ರಾಮನನ್ನು ದಶರಥನ ಮಗನಂತೆ, ಸಾಧು–ಸಜ್ಜನರ ಮಿತ್ರನಂತೆ................, ಗುರುಗಳು, ತಪಸ್ವಿಗಳು ಮೆಚ್ಚಿದಂತ ಸದ್ಗುಣಗಳ ಮೂರ್ತಿಯನ್ನು ಎಂದು ಕಾಣುವೆನೋ" ಎಂದು ಶ್ರೀರಾಮನ ಗುಣಗಾನ ಮಾಡುತ್ತಾ ಹಾಡುತ್ತಿರುತ್ತಾಳೆ. ಇದನ್ನು ನೋಡುತ್ತಾ ನಿಂತಿದ್ದ ರಾಮ ಶಬರಿಯ ಬಳಿಗೆ ಬಂದು "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?" ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ತನಗಾಗಿ ಹಂಬಲಿಸುತ್ತಿರುವ, ಗುಣಗಾನ ಮಾಡುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ "ತಾಯಿ ಪ್ರಯಾಣಿಕರಿಗೆ ಇಲ್ಲಿ ಆಶ್ರಯ ಸಿಗುವುದೇ?" ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

**4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ !"**
**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ಮಾತನ್ನು ಶಬರಿಯು ರಾಮನಿಗೆ ಹೇಳುತ್ತಾಳೆ. ಶಬರಿಯ ಆತಿಥ್ಯ ಸ್ವೀಕರಿಸಿದ ರಾಮನು "ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ. ಇಂದು ನಾವು ಕಾಡು ಎಂಬುದನ್ನು ಮರೆತು ಮನೆಯೆಂದೇ ತಿಳಿದೆವು. ಇಷ್ಟೊಂದು ಪ್ರೀತಿ ತೋರುವ ನಿನ್ನನ್ನು ತಾಯಿ ಎಂದೇ ತಿಳಿದೆವು" ಎಂದು ಶಬರಿಗೆ ಹೇಳಿದಾಗ ಶಬರಿ, "ನಿನ್ನ ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!". ನಾನು ಇಂದು ಧನ್ಯಳಾಗಿದ್ದೇನೆ ಎಂದು ರಾಮನಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** "ರಾಮ ನಿನ್ನ ರೂಪದಂತೆ ಮಾತು ಕೂಡ ಎಷ್ಟೊಂದು ಧಾರಾಳವಾಗಿದೆ" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾಳೆ.

**5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**
**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳಿದ್ದಾನೆ. ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮೋಕ್ಷಕ್ಕೆ ಪ್ರಾಪ್ತಳಾದ ನಂತರ ರಾಮನು ಈ ಪ್ರಪಂಚ ಶಬರಿಯನ್ನು ಮರೆಯುವುದು ಸಾಧ್ಯವಿಲ್ಲ ಎಂದಾಗ ಲಕ್ಷ್ಮಣ ಅಣ್ಣಾ ಶಬರಿ ಮಗುವಿನಂತೆ ಇಷ್ಟವಾದಳು. ನಮ್ಮನ್ನು ನೋಡುತ್ತಲೆ ಬಹಳ ಆನಂದ ಪಟ್ಟಳು ಎಂದು ಶಬರಿಯ ಗುಣಗಾನ ಮಾಡಿದಾಗ ರಾಮ ಹೀಗೆ ಹೇಳುತ್ತಾನೆ, ಲಕ್ಷ್ಮಣ "ಬೆಳಕಿಗೆ ಒಲಿದವರ್ ಉರಿವ ಬತ್ತಿಯ ಕರುಕ ಕಾಣರು" ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** "ಬೆಳಕನ್ನು ಇಷ್ಟಪಡುವವರು ಉರಿಯುವ ಬತ್ತಿಯ ಕಪ್ಪನ್ನು ನೋಡುವುದಿಲ್ಲ." ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

**ಉ) ಹೊಂದಿಸಿ ಬರೆಯಿರಿ**

| | ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|---|
| 1. | **ಮತಂಗ** | ಸೀತೆ | **ಆಶ್ರಮ** |
| 2. | **ಪು.ತಿ.ನ.** | ಆಶ್ರಮ | **ಮೇಲುಕೋಟೆ** |
| 3. | **ದಶರಥ** | ಮೇಲುಕೋಟೆ | **ರಾಮ** |
| 4. | **ಚಿತ್ರಕೂಟ** | ಪರ್ವತ | **ಪರ್ವತ** |
| 5. | **ಭೂಮಿಜಾತೆ** | ರಾಮ | **ಸೀತೆ** |

**ಭಾಷಾ ಚಟುವಟಿಕೆ**

**1. ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**
ಕಾರ್ಯ, ಕತ್ತಲೆ, ಇಲ್ಲ, ಶಸ್ತ್ರ, ಸ್ಫೋಟಿಸು, ಎಚ್ಚರ, ಕಣ್ಣಿಗೆ, ಅದ್ಭುತ, ಡಾಕ್ಟರ್, ಬಟ್ಟೆ.

**ವಿಜಾತೀಯ ಸಂಯುಕ್ತಾಕ್ಷರಗಳು** :– ಕಾರ್ಯ, ಶಸ್ತ್ರ, ಸ್ಫೋಟಿಸು, ಅದ್ಭುತ, ಡಾಕ್ಟರ್

**2. ನೀಡಿರುವ ಪದಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳನ್ನು ಆರಿಸಿ ಬರೆಯಿರಿ.**
ಸಮನಾಗಿ, ದೇಶ, ಮನೆಯ, ರೋದನ, ಬಳಿಕ, ನೆಲ, ಮದುವೆ, ಮಾನುಷ, ಹೊತ್ತು, ಒಳಗೆ.

| | | | | |
|---|---|---|---|---|
| ಸಮನಾಗಿ – ಸ | ದೇಶ – ಶ | ಮನೆಯ – ಯ | ರೋದನ – ರೋ | ಬಳಿಕ – ಳಿ |
| ನೆಲ – ಲ | ಮದುವೆ – ವ | ಮಾನುಷ – ಷ | ಹೊತ್ತು – ಹೊ | ಒಳಗೆ – ಳ |

**3. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ನಾಲ್ಕನೆಯ ಪದವನ್ನು ಬರೆಯಿರಿ.**

ಅ) ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : **ಮಹಾಪ್ರಾಣಾಕ್ಷರಗಳು**

ಆ) ವರ್ಗೀಯ ವ್ಯಂಜನಾಕ್ಷರಗಳು : 25 : : ಅವರ್ಗೀಯ ವ್ಯಂಜನಾಕ್ಷರಗಳು : **9**

ಇ) ಆ, ಈ, ಊ : ದೀರ್ಘಸ್ವರಗಳು : : ಅ, ಇ, ಉ, ಋ : **ಹ್ರಸ್ವಸ್ವರಗಳು**

ಈ) ಸ್ವರಗಳು : 13 : : ಯೋಗವಾಹಗಳು : **2**